**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**

**ಸಿ.ಸಿ. ನಂ.432/2014**

| | | |
|---|---|---|
| ಹೆಸರು | ಪ್ರಕಾಶ್ | ಪ್ರಾ.ಸಾ.8 |
| ತಂದೆ ಹೆಸರು | ರಂಗಪ್ಪ | ಚಾ.ಸಾ.8 |
| ವಯಸ್ಸು | 45 ವರ್ಷ | |
| ಕೆಲಸ | ಪಿ.ಐ. ಚೆನ್ನರಾಯಪಟ್ಟಣ ಪೋಲಿಸ್, | ಸಾ.ಪ್ರ.ವ.ಬೋ |
| ಹಾಲಿ ವಾಸ | ಬೆಂಗಳೂರು ಗ್ರಾಮಾಂತರ ಜಿಲ್ಲೆ | ದಿ: 20.05.2026 |

**ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :-**

ನಾನು 2012 ಸೆಪ್ಟೆಂಬರ್ ರಿಂದ 2014 ಜೂನ್ ವರೆಗೆ ನಂದಗುಡಿ ಪೊಲೀಸ್ ಠಾಣೆಯ ಪಿ.ಎಸ್.ಐ. ಆಗಿ ಕಾರ್ಯ ನಿರ್ವಹಿಸಿರುತ್ತೇನೆ.

ದಿ:03.01.2014 ರಂದು ಸಂಜೆ 4.30 ಗಂಟೆಗೆ ಚಾಸಾ.1 ರವರು ನೀಡಿರುವ ದೂರನ್ನು ಪಡೆದು ಠಾಣಾ ಮೊಕದ್ದಮೆ ಸಂಖ್ಯೆ: 2/2014 ಕಲಂ 324, 504, 506 ಪ್ರಕರಣ ದಾಖಲಿಸಿ ಪ್ರ.ವ.ವರದಿ ತಯಾರಿಸಿ, ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಯವರಿಗೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಸಂಜೆ 5.45 ಗಂಟೆಯಿಂದ 6.45 ಗಂಟೆಯವರೆಗೆ ಚಾ.ಸಾ.1 ರವರು ತೋರಿಸಿದ ಸ್ಥಳದಲ್ಲಿ ಪಂಚರಾದ ಚಾ.ಸಾ.5 ಮತ್ತು 6 ರವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ ಕೃತ್ಯ ನಡೆದ ಸ್ಥಳದಲ್ಲಿ 2 ಅಡಿ ಉದ್ದದ ಒಂದು ಕಬ್ಬಿನದ ರಾಡ್ ನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ನಂತರ ಅಮಾನತ್ತು ಪಡಿಸಿಕೊಂಡಂತಃ ಮಾಲನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ: 2/2014 ನಿಯೋಜಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ವರದಿ ಸಲ್ಲಿಸಿರುತ್ತೇನೆ. ದಿಃ 04.01.2014ರಂದು ಚಾ.ಸಾ.3 ಮತ್ತು 4ರವರ ಹೇಳಿಕೆ ಪಡೆದಿರುತ್ತೇನೆ. ದಿಃ 30.01.2014ರಂದು ಎಂ.ವಿ.ಜೆ. ಮೆಡಿಕಲ್ ಕಾಲೇಜು, ಹೊಸಕೋಟೆಯಲ್ಲಿ ಚಾ.ಸಾ.2ರವರ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ದಿಃ 02.02.2014ರಂದು ಚಾ.ಸಾ.2ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ದಿಃ 15.02.2014 ರಂದು ತನಿಖೆ ಪೂರ್ಣಗೊಳಿಸಿ ಆರೋಪಿಗಳ ವಿರುದ್ದ ಸಾಕಷು ಸಾಕ್ಷ್ಯಾದಾರಗಳು ಕಂಡು ಬಂದ ಕಾರಣ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿ ನಿ.ಪಿ.1 ರಲ್ಲಿರುವ ಸಹಿಯನ್ನು ನೋಡಿ ಗುರ್ತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿ.ಪಿ.1(ಬಿ) ಎಂದು ಗುರ್ತಿಸಲಾಯಿತು. ನಿ.ಪಿ.2 ರಲ್ಲಿರುವ ಸಹಿಯನ್ನು ನೋಡಿ ಗುರ್ತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿ.ಪಿ.2(ಬಿ) ಎಂದು ಗುರ್ತಿಸಲಾಯಿತು. ಸಾಕ್ಷಿ ಪ್ರ.ವ.ವರದಿ ಮೇಲಿರುವ ತಮ್ಮ

ಸಹಿಯನ್ನು ನೋಡಿ ಗುರ್ತಿಸಿದ್ದರಿಂದ ಪ್ರ.ವ.ವರದಿಯನ್ನು ನಿ.ಪಿ.4 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.4(ಎ) ಎಂದು ಗುರ್ತಿಸಲಾಯಿತು. ಸಾಕ್ಷಿ ಗಾಯದ ಪ್ರಮಾಣ ಪತ್ರದ ಮೇಲಿನ ತಮ್ಮ ಸಹಿಯನ್ನು ನೋಡಿ ಗುರ್ತಿಸಿದ್ದರಿಂದ ಪ್ರ.ವ.ವರದಿಯನ್ನು ನಿ.ಪಿ.5 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.5(ಎ) ಎಂದು ಗುರ್ತಿಸಲಾಯಿತು. ಮು.ಮ.1ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು ಆರೋಪಿತರ ಪರ ಎ.ಜಿ.ಎನ್. ವಕೀಲರಿಂದ:-**

ಚಾ.ಸಾ.1ರವರ ಠಾಣೆಗೆ 4.30 ಗಂಟೆಗೆ ಆ ದಿನ ಬಂದಿರುತ್ತಾರೆ. ಚಾ.ಸಾ.1ರವರು ಚಾ.ಸಾ.2ರವರಿಗೆ ಸಂಬಂಧಿಕರು ಆಗಬೇಕು ಅನಿಸುತ್ತದೆ. ಬೆಳಗ್ಗೆ 5.45 ಗಂಟೆಗೆ ಗಲಾಟೆ ಆಗಿರುತ್ತದೆ ಎಂದು ಚಾ.ಸಾ.1ರವರು ಹೇಳಿರುತ್ತಾರೆ. ಬೆಳಗ್ಗೆ 5.45 ರಿಂದ ಸಂಜೆ 4.30ರವರೆಗೆ ನಮಗೆ ಗಲಾಟೆಯ ಬಗ್ಗೆ ಯಾವುದೇ ಮಾಹಿತಿ ಬಂದಿರಲಿಲ್ಲ. ಆಸ್ಪತ್ರೆಯಿಂದ ಕೂಡ ಯಾವುದೇ ಮಾಹಿತಿ ಬಂದಿರುವುದಿಲ್ಲ. ಚಾ.ಸಾ.2ರವರು ಒಳ ರೋಗಿಯಾಗಿ ಯಾವುದೇ ಚಿಕಿತ್ಸೆ ಪಡೆದುಕೊಂಡಿರುವುದಿಲ್ಲ. ಸಾಮಾನ್ಯವಾಗಿ ಯಾವುದೇ ಒಬ್ಬ ವ್ಯಕ್ತಿಗೆ ಗಾಯಗಲಾದರೆ ತಕ್ಷಣ ಹೋಗಿ ಹತ್ತಿರದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಾರೆ ಎಂದರೆ ಸರಿ. ನಂಗಗುಡಿಯಲ್ಲಿ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಇರುತ್ತದೆ ಎಂದರೆ ಸರಿ. ಚಾ.ಸಾ.2ರವರು ನಂದಗುಡಿ ಸರ್ಕಾರಿ ಆಸ್ಪತ್ರೆಯಲ್ಲಿ ಯಾವುದೇ ಚಿಕಿತ್ಸೆ ಪಡೆದಿರುವುದಿಲ್ಲ. ದೂರನ್ನು ಗಾಯಾಳು ಕಡೆಯಿಂದ ಪಡೆದು ನೋಂದಣಿ ಮಾಡಿಕೊಳ್ಳಲು ನಮಗೆ ಯಾವುದೇ ಅಭ್ಯಂತರ ಇರಲಿಲ್ಲ. ಆ ದಿನ ನಾನು 4.30 ಗಂಟೆ ಸಮಯದಲ್ಲಿ ದೂರು ನೀಡಿದ ನಂತರ ಗಾಯಾಳು ವಿಶ್ರಾಂತಿಯಲ್ಲಿ ಇದ್ದರು ಎಂದು ಹೇಳಿದ ಕಾರಣ ಆ ದಿನ ಅವರ ಹೇಳಿಕೆಯನ್ನು ಪಡೆದುಕೊಂಡಿರಲಿಲ್ಲ. ಚಾ.ಸಾ.2ರವರು ಎಂ.ವಿ.ಜೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ. ಚಾ.ಸಾ.2 ಮತ್ತು ಆರೋಪಿಯ ನಡುವೆ ಯಾವುದೇ ಗಾಲಟೆ ಆಗಿರುವುದಿಲ್ಲ ಆದ್ದರಿಂದ ಚಾ.ಸಾ.2ರವರು ತಕ್ಷಣ ಹೋಗಿ ಯಾವುದೇ ಚಿಕಿತ್ಸೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಚಾ.ಸಾ.2ರವರಿಗೆ ದೂರಿನಲ್ಲಿ ಹೇಳಿದ ರೀತಿ ಯಾವುದೇ ರೀತಿಯ ಗಾಯಗಳು ಆಗಿರದ ಕಾರಣ ಯಾವುದೇ ಚಿಕಿತ್ಸೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಆಸ್ಪತ್ರೆಯಿಂದ ಗಾಯಾಳು ಬಗ್ಗೆ ಯಾವುದೇ ದಾಖಲೆಗಳನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಚಾ.ಸಾ.2 ಮತ್ತು ಆರೋಪಿರವರು ಆ ಊರಿನಲ್ಲಿ ಬೇರೆ ಬೇರೆ ಪಕ್ಷದವರು ಎಂದರೆ ಇರಬಹುದು. ಚಾ.ಸಾ.2 ಮತ್ತು ಆರೋಪಿಗು ದೂರನ್ನು ಪಡೆಯುವ ಮುನ್ನ 10-15 ದಿನಗಳ ಮುನ್ನ ಕೋಳಿ ಗಲಾಟೆಯಲ್ಲಿ ಸಣ್ಣ ಪುಟ್ಟ ಗಲಾಟೆ ಆಗಿರುತ್ತದೆ ಎಂದರೆ ಸರಿ. ಆ ಗಲಾಟೆಯಲ್ಲಿ ಆರೋಪಿ ಚಾ.ಸಾ.2ರವರ ವಿರುದ್ಧ ದೂರನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಆನಂತರ ಊರಿನ ಗ್ರಾಮಸ್ಥರು ಸೇರಿ ಅಲ್ಲೇ ಇತ್ಯರ್ಥ ಮಾಡಿರುತ್ತಾರೆ ಎಂದರೆ ಸರಿ. ಚಾ.ಸಾ.2ರವರು ಮರಳು ಲಾರಿಯಲ್ಲಿ ಮರಳು ತುಂಬುವ ಕೂಲಿ ಕೆಲಸವನ್ನು ಮಾಡುತ್ತಿದ್ದರು. ಮರಳು ತುಂಬುವ ಸಮಯದಲ್ಲಿ ಲಾರಿಯಿಂದ ಬಿದ್ದು ಆರೋಪಿಯ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಯಾವುದೋ ಒತ್ತಡಕ್ಕೆ ಮಣಿದು ಆರೋಪಿಯ ವಿರುದ್ಧ ಸುಳ್ಳು ದೂರನ್ನು ನೋಂದಣಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1ರಲ್ಲಿರುವ ಷರಾವನ್ನು ನಾನೇ ಬರೆದಿರುತ್ತೇನೆ. ನಿಪಿ-1ರಲ್ಲಿರುವ ಬರವಣಿಗೆ ನನ್ನದಲ್ಲ. ನಿಪಿ-1ರಲ್ಲಿರುವ ಷರಾ ಮತ್ತು ಇತರ ಬರವಣಿಗೆಗಳು ಒಂದೇ ಆಗಿರುತ್ತದೆ ಎಂದರೆ ಸರಿಯಲ್ಲ. ಚಾ.ಸಾ.2 ಮತ್ತು ಆರೋಪಿಯ ಮಧ್ಯೆ ಯಾವುದೇ ಗಾಲಟೆ ನಡೆಯದಿದ್ದರೂ ಕೂಡ ಠಾಣೆಯಲ್ಲೇ ಕುಳಿತು ನಮಗೆ ಬೇಕಾದಾಗೆ ದೂರನ್ನು

ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ದೂರನ್ನು ಸೃಷ್ಟಿಸಿ ಸುಳ್ಳು ಪ.ವ.ವರದಿ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪಂಚರಿಗೆ ಲಿಖಿತ ನೋಟೀಸ್ ನೀಡಿರುವುದಿಲ್ಲ, ಮೌಖಿಕವಾಗಿ ಹೇಳಿರುತ್ತೇನೆ. ಚಾ.ಸಾ.1, 3 ರಿಂದ 6ರವರು ಚಾ.ಸಾ.2ರವರ ಸಂಬಂಧಿಕರು ಎಂದರೆ ಇರಬಹುದು. ಗಾಯಾಳುವಿನ ಸಂಬಂಧಿಕರನ್ನು ಬಿಟ್ಟು ಬೇರೆ ಪಂಚರನ್ನು ಕರೆಸಿ ಪಂಚನಾಮೆ ಕ್ರಮವನ್ನು ಜರುಗಿಸಲು ಯಾವುದೇ ಅಭ್ಯಂತರ ಇರಲಿಲ್ಲ. ಊರಿನ ಬೇರೆ ಮುಖಂಡರನ್ನು ಪಂಚರನ್ನಾಗಿ ಕರೆಸಿದರೆ ನಿಜಾಂಶ ತಿಳಿಯುತ್ತದೆ ಎಂದು ಚಾ.ಸಾ.2ರವರ ಸಂಬಂಧಿಕರನ್ನು ಠಾಣೆಗೆ ಕರೆಸಿ ಪಂಚನಾಮೆಗೆ ಸಹಿ ಮಾಡಿಸಿಕೊಂಡಿರುತ್ತೀರ ಎಂದರೆ ಸರಿಯಲ್ಲ. ನಾನು ಯಾವುದೇ ಸ್ಥಳ ಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಮು.ಮ.1 ಸುಮಾರು 2 ಅಡಿ ಉದ್ದ ಇರುತ್ತದೆ. ಮು.ಮ.1 ಸುಮಾರು 2 1/2 ಯಿಂದ 3 ಅಡಿ ಉದ್ದ ಇರುತ್ತದೆ ಎಂದರೆ ಸರಿಯಲ್ಲ. ಮು.ಮ.1 ಕೃತ್ಯಕ್ಕೆ ಬಳಸಿರುವುದಲ್ಲ ಮತ್ತು ಇದನ್ನು ಈ ಪ್ರಕರಣಕೋಸ್ಕರ ಸೃಷ್ಟಿ ಮಾಡಿಕೊಂಡಿರುತ್ತೀರ ಎಂದರೆ ಸರಿಯಲ್ಲ. ಮು.ಮ.1ರ ಮೇಲೆ ನನ್ನದಾಗಲೀ ಅಥವಾ ಪಂಚರ ಸಹಿ ಇರುವುದಿಲ್ಲ. ಮು.ಮ.1 ಕೃತ್ಯಕ್ಕೆ ಸಂಬಂಧಿಸಿದಲ್ಲ ಮತ್ತು ಅದನ್ನು ಈ ಪ್ರಕರಣಕೋಸ್ಕರ ಸೃಷ್ಟಿಸಿಕೊಂಡಿರುತ್ತೀರ ಎಂದರೆ ಸರಿಯಲ್ಲ. ನಿಪಿ-5 ಗಾಯದ ಪ್ರಮಾಣ ಪತ್ರದಲ್ಲಿ ಆಸ್ಪತ್ರೆಯಿಂದ ಯಾವಾಗ ನೀಡಿರುತ್ತಾರೆ ಎಂದರೆ ದಿನಾಂಕ ಮತ್ತು ನಂಬರ್ ಇರುವುದಿಲ್ಲ ಎಂದರೆ ಸಾಕ್ಷಿಯು ಸೀಲಿನ ಒಳಗಡೆ ಇರುವುದಿಲ್ಲ ಮತ್ತು ಸೀಲಿನ ಪಕ್ಕದಲ್ಲಿ ದಿನಾಂಕ ನಮೂದು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-5ನ್ನು ಆಸ್ಪತ್ರೆಯ ಕಡೆಯಿಂದ ಸೃಷ್ಟಿ ಮಾಡಿಸಿಕೊಂಡಿರುತ್ತೀರ ಎಂದರೆ ಸರಿಯಲ್ಲ. ದಿಃ 02.02.2014ರಂದು ಚಾ.ಸಾ.2ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಅಲ್ಲಿಯವರೆಗು ಅವರ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಸಾಕ್ಷಿಯು ಸ್ವತಃ ಮುಂದುವರೆದು ಗಾಯಾಳು ವಿಶ್ರಾಂತಿಯಲ್ಲಿ ಇದ್ದ ಕಾರಣ ನಾನು ಹೇಳಿಕೆ ಪಡೆದುಕೊಂಡಿರುವುದಿಲ್ಲ ಎಂದು ಹೇಳುತ್ತಾರೆ. ಗಾಯಾಳು ವಿಶ್ರಾಂತಿಯಲ್ಲಿ ಇದ್ದ ಬಗ್ಗೆ ಯಾವುದೇ ಹೇಳಿಯಲ್ಲಾಗಲೀ ದೂರಿನಲ್ಲಾಗಲೀ ಅಥವಾ ದೋಷಾರೋಪಣ ಪಟ್ಟಿಯಲ್ಲಿ ನಮೂದು ಮಾಡಿರುವುದಿಲ್ಲ. ಚಾ.ಸಾ.1ರವರು ನೀಡಿದ ದೂರಿಗೆ ಸಹಾಯವಾಗಲಿ ಎಂದು ಚಾ.ಸಾ.2ರವರು ಯಾವುದೇ ಹೇಳಿಕೆಯನ್ನು ಪಡೆಯದೆ ಠಾಣೆಯಲ್ಲಿ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಚಾ.ಸಾ.3 ಮತ್ತು 4ರವರು ಠಾಣೆಗೆ ಬಂದಿರುವುದಿಲ್ಲ ಮತ್ತು ಅವರ ಹೇಳಿಕೆಗಳನ್ನು ನಾನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಸರಿಯಾದ ತನಿಖೆಯನ್ನು ಮಾಡದೆ ಆರೋಪಿಯ ವಿರುದ್ಧ ಸುಳ್ಳು ದೋಷಾರೋಪಣಪಟ್ಟಿಯನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಚಾ.ಸಾ.2 ಮತ್ತು ಅವರ ಕುಟುಂಬದವರ ಮಾತನ್ನು ಕೇಳಿಕೊಂಡು ಆರೋಪಿಯ ವಿರುದ್ಧ ಸುಳ್ಳು ದೂರನ್ನು ನೋಂದಣಿ ಮಾಡಿಕೊಂಡು ಸುಳ್ಳು ದೋಷಾರೋಪಣಪಟ್ಟಿಯನ್ನು ಸಲ್ಲಿಸಿರುತ್ತೀರ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**
**ಹೊಸಕೋಟೆ.**